ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

ದಿಃ 20-01-2017

**ಮುಖ್ಯ ವಿಚಾರಣೆಃ ಶ್ರೀ ಎ ಪಿ ಎಂ ವಕೀಲರಿಂದ**

ನಾನು ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ನಾನು ಕೇಸಿಗೆ ಸಂಬಂದಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. 2 ಪಹಣಿಗಳ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ 1 ಮತ್ತು ನಿ.ಪಿ 2 ಎಂದು , ಎಂ ಆರ್ ಎಕ್ಸ್‌ಟ್ರಾಕ್ಟನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ.ಪಿ 3 ಎಂದು , ದಿಃ 23-09-2000 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ 4 ಎಂದು , ಋಣಭಾರ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 5 ಎಂದು , 2001 ನೇ ಇಸವಿಯ ಎಂ ಆರ್ ಎಕ್ಸ್‌ಟ್ರಾಕ್ಟ್‌ನ್ನು ನಿ.ಪಿ 6 ಎಂದು , 2010 ರ ಎಂ ಆರ್ ಎಕ್ಸ್‌ಟ್ರಾಕ್ಟ್‌ನ್ನು ನಿ.ಪಿ 7 ಎಂದು, 2012 ರ ಎಂ ಆರ್ ಎಕ್ಸ್‌ಟ್ರಾಕ್ಟ್‌ನ್ನು ನಿ.ಪಿ 8 ಎಂದ, 2013 ರ 2 ಎಂ ಆರ್ ಎಕ್ಸ್‌ಟ್ರಾಕ್ಟ್‌ನ್ನು ನಿ.ಪಿ 9 ಮತ್ತು 10 ಎಂದು, 2014-15ನೇ ಸಾಲಿನ ಪಹಣಿಯನ್ನು ನಿ.ಪಿ 11 ಎಂದು, ಪ್ರತಿವಾದಿಗಳಿಗೆ ನೋಟಿಸ್ ನ ಪ್ರತಿಯನ್ನು ನಿ.ಪಿ 12 ಎಂದು , 4 ಅಂಚೆ ರಶೀದಿಗಳನ್ನು ನಿ.ಪಿ 12 ಎ ನಿಂದ 12 ಡಿ ಎಂದು, ಪ್ರತಿವಾದಿ 3 ಮತ್ತು 4 ರವರಿಗೆ ನೋಟೀಸ್ ಜಾರಿಯಾಗಿದೇ ಹಿಂದಿರುಗಿ ಬಂದ ಕವರನ್ನು ನಿ.ಪಿ 13 ಎಂದು , ನೋಟೀಸನ್ನು ನಿ.ಪಿ 13 ಎ ಎಂದು, 3ನೇ ಪ್ರತಿವಾದಿಗೆ ನೋಟೀಸ್ ಜಾರಿಯಾಗದೇ ಬಂದ ಕವರನ್ನು ನಿ.ಪಿ 14 ಎಂದು , ನೋಟೀಸನ್ನು ನಿ.ಪಿ 14ಎ ಎಂದು , ರಿಪ್ಲೇ ನೋಟೀಸನ್ನು ನಿ.ಪಿ 15 ಎಂದು ಗುರ್ತಿಸಲಾಯಿತು.

ನಾನು ಪ್ರಮಾಣಪತ್ರದಲ್ಲಿ ಕೇಳಿರುವ ಪ್ರಕಾರ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ ಃ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

ಸಿವಿಲ್ ನ್ಯಾಯಾಧೀಶರು